94

# ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಪ್ರಕಾಶ್ ಬಾಬಣ್ಣಾ ಹುಕ್ಕೇರಿ ಇವರು ನಿಯಮ 330ರಡಿ ಮಂಡಿಸಿರುವ ಸೂಚನೆಗೆ ಉತ್ತರ

**ವಿಷಯ:** ಬೆಳಗಾವಿ ಭಾಗದ ಜನರ ಬಹು ಬೇಡಿಕೆಯಾಗಿದ್ದ ಸುಸಜ್ಜಿತ ವೈದ್ಯಕೀಯ ಸೌಲಭ್ಯ ನೀಡುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯು 2017ರಲ್ಲಿ ಮಂಜೂರಾಗಿ 2023ರಲ್ಲಿ ಕಟ್ಟಡ ಕಾಮಗಾರಿ ಪೂರ್ಣಗೊಂಡು, ಅಗತ್ಯ ತುರ್ತು ಉಪಕರಣಗಳು ಪೂರೈಕೆಯಾಗಿ ಕೆಲವು ವೈದ್ಯ & ಸಿಬ್ಬಂದಿ ಹುದ್ದೆಗಳ ಮಂಜೂರಾತಿ ದೊರೆತರೂ ಸಹ ಇಲ್ಲಿಯವರೆಗೆ ಸದರಿ ಆಸ್ಪತ್ರೆ ಕಾರ್ಯಾರಂಭ ಮಾಡದಿರುವ ಕುರಿತು.

****

**ಉತ್ತರ**: ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಬಿಮ್ಸ್, ಬೆಳಗಾವಿಯ ಕಟ್ಟಡ ಪೂರ್ಣ ಗೊಂಡಿರುತ್ತದೆ. ಸದರಿ ಆಸ್ಪತ್ರೆಗೆ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಈಗಾಗಲೇ ಸೃಜಿಸಲಾಗಿದೆ. ಅದರನ್ವಯ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಬೇಕಾಗುವ ತಜ್ಞ ವೈದ್ಯರನ್ನು ತುರ್ತಾಗಿ ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಿಕೊಳ್ಳಲು ದಿನಾಂಕ:13.12.2024 ರಂದು ಅಧಿಸೂಚನೆ ಹೊರಡಿಸಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸೂಪರ್‌ಸ್ಪೆಷಾಲಿಟಿ ಆಸ್ಪತ್ರೆಗೆ ಬೇಕಾಗುವ ಯಂತ್ರೋಪಕರಣಗಳು ಈಗಾಗಲೇ ಶೇಕಡಾ 40ರಷ್ಟು ಸ್ವೀಕೃತಿಯಾಗಿರುತ್ತವೆ. ಉಳಿದ ಯಂತ್ರೋಪಕರಣಗಳನ್ನು ಸರಬರಾಜು ಮತ್ತು ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದ್ದು, ಶೀಘ್ರದಲ್ಲಿ ಬೆಳಗಾವಿಯ ಸೂಪರ್‌ಸ್ಪೆಷಾಲಿಟಿ ಆಸ್ಪತ್ರೆಯನ್ನು ಕಾರ್ಯಾರಂಭಿಸಲಾಗುವುದು.

**ಸಂಖ್ಯೆ:** ಎಂಇಡಿ 612 ಎಂಎಂಸಿ 2024

**(ಡಾ:ಶರಣಪ್ರಕಾಶ ಆರ್. ಪಾಟೀಲ)**
ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರು